ನಿಮಿಷವೂ ಭಾರವಾಗುತ್ತಿದೆಯೆಂದುಕೊಳ್ಳುತ್ತಿದ್ದಾನೆ ರಾಜಶೇಖರ.

ಆ ರಾತ್ರಿ ಎಲ್ಲರೂ ಬೇಗನೆ ಊಟ ಮಾಡಿದರು. ಆ ಮನೆಯನ್ನು ಶೋಭನದ ಮನೆಯನ್ನಾಗಿ ಮಾಡುವ ಅವಕಾಶವಿದ್ದರೂ ಒಂದು ಕೋಣೆಯನ್ನು ಸುಶೀಲ ತನಗೆ ತಿಳಿದರೀತಿಯಲ್ಲಿ ಅಲಂಕರಿಸಿದಳು. ಈ ಕಾರ್ಯದ ಸಂಭ್ರಮವನ್ನು ಎಲ್ಲರಿಗೂ ತಿಳಿಯುವಂತೆ ಮಾಡುವ ರೂಢಿ ಈ ಪ್ರದೇಶದಲ್ಲಿಲ್ಲ. ಸುಶೀಲಳ ತವರುಮನೆ ಊರಿನ ಕಡೆ ಇದನ್ನು ವಿಜೃಂಭಣೆಯಿಂದ ಮಾಡುತ್ತಾರೆ. ಊಟವಾದ ತಕ್ಷಣವೇ ಮಗಳನ್ನು ಅಲಂಕರಿಸುವ ಕೆಲಸದಲ್ಲಿ ಮಗ್ನಳಾದಳು ಸುಶೀಲ. ಊಟಕ್ಕೆ ಮೊದಲೇ ಶೋಭನದ ಕೋಣೆಯನ್ನು ತಯಾರಿಸಿ ಇಟ್ಟಿದ್ದಳು.

ಪಾರ್ವತಮ್ಮ ಪಡಸಾಲೆಯಲ್ಲಿ ಮಲಗಿಕೊಂಡು ಆಗಲೇ ಗೊರಕೆ ಆರಂಭಿಸಿದ್ದಾಳೆ. ಗಂಡುಮಕ್ಕಳಿಬ್ಬರೂ ಬಟ್ಟೆಗಳನ್ನು ತೆಗೆದುಕೊಂಡು ಮಾಳಿಗೆ ಮೇಲೆ ಹೋಗಿದ್ದಾರೆ. ಬಾಗಿಲಲ್ಲಿ ಮಂಚದ ಮೇಲೆ ಕುಳಿತುಕೊಂಡು ಮಾವ ಅಳಿಯ ಹಾಳಾಗಿಹೋಗುತ್ತಿರುವ ಬೆಳೆ ಕುರಿತು, ಮುಂಬರುವ ಬರಗಾಲ ಕುರಿತು ಮಾತಾಡಿಕೊಳ್ಳುತ್ತಿದ್ದಾರೆ.

ಇದ್ದಕ್ಕಿದ್ದಂತೆ ಬಿದ್ದಿತೊಂದು ಮಳೆಹನಿ.

ಅದು ಸರಿಯಾಗಿ ಅನಂತರೆಡ್ಡಿಯ ಕೈಮೇಲೆ.

ಗಾಬರಿಯಿಂದ ತಲೆಯೆತ್ತಿ ಮೇಲೆ ನೋಡಿದ.

ಆಕಾಶ ನಿರಾಳವಾಗಿಯೇ ಇದೆ.

'ಮಳೆ ಬರ್ತಿದ್ದಂಗೈತೆ ಮಾವ' ಎಂದನು ರಾಜಶೇಖರ. ಆತನ ಮೇಲೆಯೂ ಎರಡು ಹನಿಗಳು ಬಿದ್ದವು.

'ಹೌದು! ಆದರೆ ಮೋಡಗಳೇ ಇಲ್ಲ. ಇನ್ನೆಲ್ಲೆನ್ನ ಬರ್ತೈತೇನೋ' ಎಂದ ಅನಂತರೆಡ್ಡಿ.

ಮತ್ತೆ ಐದು ನಿಮಿಷಗಳವರೆಗೆ ನಾಲ್ಕನೇ ಹನಿ ಬೀಳಲಿಲ್ಲ. ಮಳೆಯ ಸಂಗತಿ ಮರೆತು ಮಾತಿಗಿಳಿದರು ಇಬ್ಬರೂ. ಆಗ ಆರಂಭವಾಯಿತು ತಣ್ಣನೆಯ ಗಾಳಿ. ಎಲ್ಲೋ ಮಾರುಮೂಲೆ ಪ್ರದೇಶದಲ್ಲಿ ಅಡಗಿಕೊಂಡಂತಿದ್ದ ಕಪ್ಪನೆಯ ಮೋಡಗಳು ಆ ಊರಿನ ಮೇಲೆ ಆವರಿಸಿಕೊಳ್ಳಲಾರಂಭಿಸಿದವು.

'ಮೋಡಾಗ್ತಿದೆ ಮಳೆ ಬರಂಗೈತೆ.'

ಆ ಮಬ್ಬುಗತ್ತಲಲ್ಲಿ ಆನಂದದ ಮೆರಗು ಆತನ ಮುಖದ ಮೇಲೆ ಪ್ರತಿಫಲಿಸಿತು. ಟಪಟಪಾ ಮಳೆಹನಿಗಳು ಬೀಳುತ್ತಿವೆ. ಧಡಲ್ ಎಂದು ಗುಡುಗು ಬಡಿಯಿತು. ಚಮಕ್ಕೆಂದು ಮಿಂಚಿತು. ತೋಯ್ದ ನೆಲದಿಂದ ಬರುವಂತೆ ಗಾಳಿಯು ಮಣ್ಣಿನ ವಾಸನೆಯನ್ನು ಹೊತ್ತುತರುತ್ತಿದೆ.

'ಒಳಗೋಗನ ನಡಿ ರಾಜಾ..... ತೋಯಿಸಿಗಂತೀವಿ' ಎಂದು ಎದ್ದ ಅನಂತರೆಡ್ಡಿ.

'ಮಂಚ ಕೂಡ ಒಯ್ಯೋಣ. ನೀನು ಆ ಸೈಡಿಗೆ ಹಿಡಕ' ಎಂದ ರಾಜಶೇಖರ.

'ನೀನು ಹಿಡಕಂತಿಯಾ ಬ್ಯಾಡ ಬ್ಯಾಡ ಬಿಡು. ನಾನೊಬ್ಬನೇ ತರ್ತೀನಿ ನೀನಡಿ.'

ಇನ್ನೂ ಶೋಭನ ಕೂಡ ಆಗದ ಹೊಸ ಅಳಿಯ ತನ್ನ ಸಹಾಯಕ್ಕಾಗಿ ಮಂಚ ಹಿಡಿದುಕೊಳ್ಳಲು ಬಂದಾಗ ಆತ ಅಲ್ಲಾಡಿಹೋದ.

'ಪರವಾಗಿಲ್ಲ ಮಾವ ತಪ್ಪೇನೈತೆ ಹಿಡಕೊ' ಇಬ್ಬರೂ ಸೇರಿ ಮಂಚವನ್ನು ಪಡಸಾಲೆಗೆ ತಂದರು. ಮಾಳಿಗೆ ಮೇಲೆ ಮಲಗಿದ್ದ ಹುಡುಗರಿಬ್ಬರೂ ಬಟ್ಟೆ ಸುತ್ತಿಕೊಂಡು ಕೆಳಗಡೆ ಓಡಿಬಂದರು.

'ಈ ದಿನ ನಿಜವಾಗ್ಲೂ ಒಳ್ಳೆ ದಿನವೇ ತಾಯಿ. ಮಳೆ ಕೂಡ ಬೀಳ್ತಿದೆ' ಮಗಳ ಹೂವಿನ ಜಡೆ ಸರಿಮಾಡುತ್ತಾ ಎಂದಳು ಸುಶೀಲ.